ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿಸಿ. ಸಂಖ್ಯೆ: 69/2024**

ಪ್ರ.ವ.ಬೋ.ತಾಃ 28-01-2026

ಚಾಸಾಃ 16 ಫ್ರಾಸಾಃ 9

| | |
|---|---|
| ಸಾಕ್ಷಿಯ ಹೆಸರು | ಲಕ್ಷ್ಮೀನಾರಾಯಣ |
| ತಂದೆ/ಗಂಡನ ಹೆಸರು | ನರಸಿಂಹಯ್ಯ |
| ವಯಸ್ಸು | 46 ವರ್ಷ |
| ವೃತ್ತಿ | ಪೊಲೀಸ್ ಮುಖ್ಯ ಪೇದೆ, ಮಿಡಿಗೇಶಿ ಪೊಲೀಸ್ ಠಾಣೆ |
| ವಾಸ | ಮಿಡಿಗೇಶಿ, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ನಾನು 2020 ರಿಂದ ಇಲ್ಲಿಯವರೆಗೆ ಮಿಡಿಗೇಶಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 19.07.2024 ರಂದು ಚಾಸಾ.18 ರವರ ಆದೇಶದಂತೆ ಮೃತ ನಿಜಲಿಂಗಪ್ಪರವರ ಬೆಂಗಾವಲಿನ ಕರ್ತವ್ಯಕ್ಕೆ ನೇಮಕಗೊಂಡಿರುತ್ತೇನೆ. ಅದರಂತೆ ಮಧುಗಿರಿ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಮೃತ ನಿಜಲಿಂಗಪ್ಪರವರ ಶವ ಪಂಚನಾಮೆ ವರದಿಯನ್ನು ಬೆಳಗ್ಗೆ 9.00 ರಿಂದ 11.00 ಗಂಟೆಯವರೆಗೆ ಚಾಸಾ.6 ರಿಂದ 8 ರವರ ಸಮಕ್ಷಮ ಚಾಸಾ.18 ರವರು ಹೇಳಿದಂತೆ ಬೆರಳಚ್ಚು ಮಾಡಿರುತ್ತೇನೆ. ಆ ಶವ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.16 ಎಂದು ಈಗಾಗಲೇ ಗುರುತಿಸಲಾಗಿದೆ. ಆನಂತರ

ಚಾಸಾ.19 ರವರ ಆದೇಶದಂತೆ ಅದೇ ದಿನ ಅಪಘಾತವಾದ ಸ್ಥಳಕ್ಕೆ ಭೇಟಿ ನೀಡಿ ಮಧ್ಯಾಹ್ನ 2.00 ರಿಂದ 3.00 ಗಂಟೆವರೆಗೆ ಚಾಸಾ.19 ರವರು ಹೇಳಿದಂತೆ ಸ್ಥಳ ಪಂಚನಾಮೆಯನ್ನು ಬೆರಳಚ್ಚು ಮಾಡಿರುತ್ತೇನೆ. ಆ ಸ್ಥಳ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.11 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.11(ಡಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆಯಲಾದ ಒಂದು ಫೋಟೋವನ್ನು ನೋಡಿ ಗುರುತಿಸುತ್ತೇನೆ. ಆ ಫೋಟೋವನ್ನು ನಿಪಿ.12 ಎಂದು ಈಗಾಗಲೇ ಗುರುತಿಸಲಾಗಿದೆ. ಅದೇ ದಿನ ಠಾಣೆಗೆ ವಾಪಸ್ಸು ಬಂದು ಅಪಘಾತಕ್ಕೆ ಸಂಬಂಧಪಟ್ಟ ಒಂದು ದ್ವಿಚಕ್ರ ವಾಹನ ಸಂ ಕೆಎ-64-ಕೆ-1699 ಮತ್ತು ಅಪಘಾತಪಡಿಸಿದ ಬುಲೇರೋ ಪಿಕಪ್ ವಾಹನ ಸಂ.ಕೆಎ-06-ಎಬಿ-5721 ಗಳನ್ನು ಜಪ್ತುಪಡಿಸಿಕೊಂಡಿದ್ದು, ಆ ಅಮಾನತ್ತು ಪಂಚನಾಮೆಯನ್ನು ಮಧ್ಯಾಹ್ನ 3.30 ರಿಂದ 4.30 ಗಂಟೆಯವರೆಗೆ ಚಾಸಾ.19 ರವರು ಹೇಳಿದಂತೆ ಬೆರಳಚ್ಚು ಮಾಡಿರುತ್ತೇನೆ. ಆ ಅಮಾನತ್ತು ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.15 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.15(ಡಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಎರಡು ಫೋಟೋಗಳನ್ನು ತೆಗೆಯಲಾಗಿರುತ್ತದೆ. ಆ ಫೋಟೋಗಳ್ಳು ನಿಪಿ.13 ಮತ್ತು 14 ಎಂದು ಈಗಾಗಲೇ ಗುರುತಿಸಲಾಗಿದೆ. ಆ ಬುಲೇರೋ ವಾಹನಕ್ಕೆ ಸಂಬಂಧಪಟ್ಟ ನಾಲ್ಕು ಫೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಪಿ.2 ರಿಂದ 5 ಎಂದು ಮತ್ತು ದ್ವಿಚಕ್ರ ವಾಹನಕ್ಕೆ ಸಂಬಂಧಪಟ್ಟ ನಾಲ್ಕು ಫೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಪಿ.6 ರಿಂದ 9 ಎಂದು ಈಗಾಗಲೇ ಗುರುತಿಸಲಾಗಿದೆ. ಆ ಫೋಟೋಗಳಿಗೆ ಸಂಬಂಧಪಟ್ಟ ಒಂದು ಸಿ.ಡಿ.ಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.26 ಎಂದು ಗುರುತಿಸಲಾಯಿತು. ಆ

ಫೋಟೋಗಳಿಗೆ ಸಂಬಂಧಪಟ್ಟ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 63(4)(ಸಿ) ರ ಅಡಿಯಲ್ಲಿ ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದು, ಆ ದೃಢೀಕೃತ ಪತ್ರವನ್ನು ನಿಪಿ27 ಎಂದು, ಸಾಕ್ಷಿಯ ಸಹಿಯನ್ನು ನಿಪಿ.27(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ– ಆರೋಪಿತರ ಪರವಾಗಿಃ ಶ್ರೀ. ಜಿ.ಎಸ್.ಆರ್. ವಕೀಲರಿಂದಃ–**

ಆ ಶವ ಪಂಚನಾಮೆ ಮತ್ತು ಅಮಾನತ್ತು ಪಂಚನಾಮೆಗಳನ್ನು ಕೈಗಳಿಂದ ಬರೆಯಲಾಗಿರುವುದಿಲ್ಲ. ಮೃತ ನಿಜಲಿಂಗಪ್ಪರವರ ಶವ ಕಾವಲಿಗಾಗಿ ನೇಮಿಸಿದ ಬಗ್ಗೆ ಲಿಖಿತ ಆದೇಶ ನೀಡಿರುವುದಿಲ್ಲ. ಆ ಫೋಟೋಗಳನ್ನು ನಾನು ನನ್ನ ಮೊಬೈಲ್ ಮೂಲಕ ತೆಗೆದೆನು. ಈ ಬಗ್ಗೆ ನಾನು ನಮ್ಮ ಮೇಲಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುವುದಿಲ್ಲ. ಆ ದಿನ ನನ್ನನ್ನು ಮೃತ ನಿಜಲಿಂಗಪ್ಪರವರ ಬೆಂಗಾವಲಿಗೆ ನೇಮಿಸಿರುವುದಿಲ್ಲ, ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಯಾವುದೇ ಸ್ಥಳ ಮತ್ತು ಅಮಾನತ್ತು ಪಂಚನಾಮೆ ಮಾಡಿರುವುದಿಲ್ಲ, ಅವುಗಳನ್ನು ನಾನು ಲ್ಯಾಪ್ ಟಾಪ್ ಮೂಲಕ ಬೆರಳಚ್ಚು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಮೇಲಾಧಿಕಾರಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ